ಮಾವನಿಂದ ಸಿದ್ಧಾಂತವಾದಿ ಪ್ರಭಾಕರ ಕಾಲು ತೊಳೆಸಿಕೊಳ್ಳುವದಾದ ಮೇಲೆ ಕರೆದು, ಕೇಳಿದ್ದ– 'ಯಾಕ, ವಸಂತ ಇನ್ನೂ ಬರ್ಲಿಲ್ಲೇನು? ಆಗ ಸುಧೀರನೇ ಹೇಳಿದ್ದ, 'ಅಂವ ಎಂದೂ ತಪ್ಪದಾಂಗಿಲ್ಲೇಳು. ಬಂದೇ ಬರ್ತಾನ. ಇಂಥ ರಾತ್ರಿ ಬರಲಿಲ್ಲಾಂದ್ರ ನಾಳೆ ಅಕ್ಷತಾದ ಹೊತ್ತಿನ ತನಕಾ ಅಂತೂ ಬಂದೇ ಬರ್ತಾನ.' ಆಗ ವಿನಾಕಾರಣ ಅವನ ಬಗ್ಗೆ ಅಸ್ವಸ್ಥನಾಗುವ ಚಿಂತಾಮಣಿ 'ಬರದೇ ಏನ ಮಾಡ್ತಾನ. ಎಷ್ಟ ಅಂದ್ರೂ ವ್ಯಾವಹಾರಿಕ ಮನಷ್ಯಾ' ಎಂದು ಹೇಳಿ ಎಲ್ಲರೂ ದಿಟ್ಟಿಸಿ ನೋಡುವಂತೆ ಹಃ ಹಃ ಹಃ ಎಂದು ನಕ್ಕಿದ್ದ.

ರತ್ನಾಕರ ಮತ್ತು ಉಳಿದ ಗೆಳೆಯರೆಲ್ಲ ಕೂಡಿ ಶ್ರೀಮಂತ ಪೂಜನದ ಊಟಕ್ಕಾಗಿ ದಾರಿ ಕಾಯದೆ ಸಂದೀಪನ ಖೋಲಿಯಲ್ಲಿ ಇಸ್ಪೀಟು ಆಡುತ್ತ ಕುಡಿಯುತ್ತ ಬೆಳಗಿನ ನಾಲ್ಕು ಗಂಟೆಯವರೆಗೆ ತಮ್ಮ ತಮ್ಮ ಬದುಕಿನ ಸಾರ್ಥಕತೆಯ ಬಗ್ಗೆ ಹೇಳಿಕೊಂಡರು. ಹೀಗೆ ಹೇಳುವಾಗ ಅವರಿಗೆ ತಾವು ಹೇಳಿದ್ದರಲ್ಲಿ ಅರ್ಧಕ್ಕಿಂತ ಹೆಚ್ಚು ಸುಳ್ಳೇ ಎಂದು ಅವನು ಕೇಳದೇ ಇದ್ದಾಗ ದೊಡ್ಡ ಜಗಳವೇ ಆಗಿ ರತ್ನಾಕರನ ಬಾಯಿಯಿಂದ 'ಇಂಥಾ ಪರಿ ಬದಕೋದಕಿಂತ ಸಾಯೋದೇ ಲೇಸು' ಎಂಬ ಮಾತು ಬಂದಿತ್ತು.

ಊರ ಹೊರಗಿನ ಎಕ್ಸಟೆಂಶಿನಲ್ಲಿ ಯಾರದೋ ಮನೆಯ ಒಂದು ಖೋಲಿ ಬಾಡಿಗೆಗೆ ತೆಗೆದುಕೊಂಡು ಜಾನಕಿ ಇದ್ದ ಮನೆ ಹುಡುಕಿ ಹೋಗಬೇಕಾದರೆ ಸಾಕು ಸಾಕಾಗಿತ್ತು. ಮಧ್ಯಾಹ್ನದ ಹೊತ್ತಾಗಿ ಇಲ್ಲಿ ವಸಂತ ಇದ್ದರೆ ಒಂದೋ ಏನೂ ಆತ ಮಾತನಾಡುತ್ತಿರಲಿಲ್ಲ ಅಥವಾ ಯಾವ ಸುಳ್ಳಿನ ಲೇಪನವೂ ಇಲ್ಲದೇ ಎಲ್ಲವನ್ನೂ ಖರೇ ಖರೇ ಹೇಳುತ್ತಿದ್ದ ಅನಿಸಿತು. ಕುಡಿದಾಗ ಮತ್ತು ಕುಡಿಯದೇ ಇದ್ದಾಗ ಕೂಡ. ಅದಕ್ಕೇ ಗೆಳಯರಿಗೆಲ್ಲ ಇಂಥ ಸಂಭ್ರಮದ ಸಮಾರಂಭಗಳಲ್ಲಿ ಬಹಳಷ್ಟು ಸಾರೆ ಆತ ಕಿರಿಕಿರಿಯಾಗುತ್ತಿದ್ದ.

ಮರುದಿನ ಅಕ್ಷತಾದ ಹೊತ್ತಿಗೂ ಕೂಡ ವಸಂತ ಬರಲಿಲ್ಲ. ಆಗ ಮಾತ್ರ ಎಲ್ಲರಿಗೂ ಸ್ವಲ್ಪ ಆಶ್ಚರ್ಯವಾಗಿತ್ತು. 'ಅಬ್ಬಾ, ಹರಿಹರದಿಂದ ಹುಬ್ಬಳ್ಳಿ ಏನು ಅಷ್ಟು ದೂರಲ್ಲ, ಮತ್ತೆ ಯಾಕ ಬರಲಿಲ್ಲ ವಸಂತ?' ಎಂದು ಶೇಖರ ಕೇಳಿದಾಗ ಯಾರೋ ಹೆಂಗಸಿನ ಜೊತೆಗೆ ತಾಸುಗಟ್ಟಲೇ ಮಾತನಾಡಿ ಅದೇ ಆಗ ಬಂದ ಸುಧೀರ ಹೇಳಿದ್ದ. (ಈ ಸುಧೀರನಿಗೆ ಹೆಂಗಸರ ಜೊತೆಗೆ ಬಹಳ ಸಲಿಗೆ, ಎಲ್ಲರನ್ನೂ ಅಕ್ಕಾ, ವೈನಿ, ಕಾಕೂ ಎಂದು ಮಾತನಾಡಿಸಿ ಅವರೊಳಗಿನವಾಗಿ ಅಡುಗೆ ಮನೆಯವರೆಗೆ ಹೋಗಿ ಮಣೆ ಹಾಕಿಕೊಂಡು ಎಲ್ಲರ ಮಾಹಿತಿ ತೆಗೆಯುತ್ತಿದ್ದ. ಇದಕ್ಕೇ ಎಲ್ಲರೂ ಅವನನ್ನು ಜೇಮ್ಸ್‌ಬಾಂಡ್ ಸುಧೀರ ಎಂದು ನಗೆಚಾಟಿಕೆ ಮಾಡುತ್ತಿದ್ದರು). 'ಅಲ್ರೋ, ಕೇಳಿದರೇನು ಸುದ್ದಿ? ವಸಂತ ಹರಿಹರದಾಗ ಇಲ್ಲಂತ ಈಗ. ಮುಂಬೈ ಹತ್ತಿರ ಎಲ್ಲೋ ಖರ್ಡಿ ಅಂತ ಯಾವುದೋ ಸಣ್ಣ ಸುಡುಗಾಡು ಸಬರ್ಬಿದಾಗ ಇರ್ತಾನಂತ. ಆ ನಮ್ಮ ವಸುಧಾಳ ಭಾಗಕ್ಕಾಗಿ ದೋಂಬಿವಲಿಯಲ್ಲಿ ಕಾಯಕ ಮಠದಾಗ ಆರಾಧನ ಹೊತ್ತಿಗೆ ಭೇಟ್ಟಿಯಾಗಿದ್ದಂತ. ಆ ಕಸಾರಾದಾಗ ಬಿಲ್ಡಿಂಗಿನ ಕೆಲಸದಲ್ಲಿ ಕಲ್ಲು–ಮಣ್ಣು ಹೊತ್ತು ಹೊಟ್ಟೇ ತುಂಬಕೋತಿನಿ ಅಂತ ಅವನ ಹೇಳಿದನಂತ.' ಒಂದೇ ಉಸಿರಿನಲ್ಲಿ ಸುಧೀರ ಇಷ್ಟು ಸುದ್ದಿ ಹೇಳಿ 'ಏನಂತೀ ಸುಶೀಲಾ' ಅನ್ನುತ್ತ ಯಾರದೋ ಹಿಂದೆ ಮಾಯವಾಗಿದ್ದ.

ಕೇಳಿ ಎಲ್ಲರಿಗೂ ಒಂದು ಕ್ಷಣ (ಒಂದೇ ಕ್ಷಣ?) ಕಳವಳವಾಗಿತ್ತು. ಮುಂದೆ ಅಕ್ಷತಾದ ಗದ್ದಲದಲ್ಲಿ, ಬನಾರಸಿ ಕಾಂಜೀವರಮ್ ಸೀರೆಯ ಝಗಝಗಾಲದಲ್ಲಿ, ಮಲ್ಲಿಗೆ ಹೂವಿನ ಪರಿಮಳದಲ್ಲಿ, ಯಾವದೋ ಹುಡುಗಿ ನಕ್ಕಿದ್ದು ತನಗೇ ಎಂದು ತಿಳಿಯುವುದರಲ್ಲಿ ಎಲ್ಲರೂ ಖರ್ಡಿ ಮರೆತು ಬಿಟ್ಟಿದ್ದರು. ಸಿಗರೇಟು ಹಚ್ಚಲಿಕ್ಕೆಂದು ರತ್ನಾಕರ ತಾವು ಬಂದ ಕಾಂಟ್ರ್ಯಾಕ್ಟ್